ಓ ಎಸ್ ನಂಃ225/2019

**ಪಿ. ಡಬ್ಲ್ಯೂ ಃ 1**

**ದಿಃ 19.06.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲು ಃ ಪ್ರತಿವಾದಿ 30 ರಿಂದ 32 ರವರ ಪರ ಶ್ರೀ ಸಿ ವಿ ಕೆ ವಕೀಲರಿಂದ ಃ**

ನಾನು ನಿವೃತ್ತ ಜೆ ಡಿ ಇರುತ್ತೇನೆ. ಕೃಷ್ಣಚಾರ್ ಇವರು ಸಹಾಯಕ ಪಾದ್ಯಾಪಕರು ಮತ್ತು ವೈದ್ಯರಾಗಿದ್ದರು. 1972 ರಲ್ಲಿ ಕೃಷ್ಣಚಾರ್ ಇವರು ತೀರಿಕೊಂಡಿದ್ದಾರೆ ಎಂದರೆ ಸರಿ. ಆಗ ನನಗೆ 11 ವರ್ಷ ವಯಸ್ಸಿತ್ತು. ಕೃಷ್ಣಚಾರ್ ಇವರು ಜಯಲಕ್ಷ್ಮಮ್ಮ ಇವರನ್ನು ಮದುವೆಯಾಗಿದ್ದರು ಎಂದು ತೋರಿಸಲು ದಾಖಲ ಕೊಟ್ಟಿಲ್ಲ. ಆದರೆ ದಾಖಲೆಗಳಿವೆ ಕೊಡುತ್ತೇನೆ ಎಂದು ಸಾಕ್ಷಿ ಹೇಳುತ್ತಾರೆ. ಪುಟ್ಟಶ್ಯಾಮಚಾರ್ ಇವರು ಕೃಷ್ಣಾಚಾರ್ ಇವರ ತಂದೆ ಎಂದರೆ ಸರಿ. ಪುಟ್ಟಶ್ಯಾಮಚಾರ್ ಇವರು ಯಾವ ವರ್ಷದಲ್ಲಿ ಯಾವ ಸ್ವತ್ತುಗಳನ್ನು ಕ್ರಯಕ್ಕೆ ತಗೆದುಕೊಂಡರು ಎಂದು ನನಗೆ ಹೇಳಲಾಗುವುದಿಲ್ಲ ಆ ಬಗ್ಗೆ ದಾಖಲೆಗಳನ್ನು ಕೊಟ್ಟಿಲ್ಲ ಎಂದು ಸಾಕ್ಷಿ ಹೇಳುತ್ತಾರೆ.

ಜೂನ್ 2018 ರಲ್ಲಿ ನಾನು ಪೋನ್ ಮಾಡಿ ಮೃತ್ಯುಂಜಯಚಾರ್ ಇವರನ್ನು ಭಾಗ ಕೊಡಿ ಎಂದು ಕೇಳಿದ್ದೇನು. ನಾನು ಪೋನ್ ಮುಖಾಂತರ ಕೇಳಿದ್ದೇನೆ ಮತ್ತು ತಿಪಟೂರಿಗೆ ಸ್ವತಃ ಹೋಗಿ ಕೇಳಿದ್ದೇನೆ ಎಂದು ಸಾಕ್ಷಿ ಹೇಳುತ್ತಾರೆ. ಪೋನ್ ಮಾಡಿದ ಬಗ್ಗೆ ಕಾಲ್ ಲಾಗ್ ಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಜೂನ್ 2018 ರಲ್ಲಿ ಭಾಗ ಕೇಳಿದ್ದರೂ ಆಗಸ್ಟ್ 2019 ರವರೆಗೆ ದಾವೆ ಹಾಕಲು ಆಗಲಿಲ್ಲ. ಏಕೆಂದರೆ ದಾಖಲೆಗಳು ಸಿಗಲಿಲ್ಲ ಮತ್ತು ಯಾರು ನನಗೆ ಸಹಕಾರ ಕೊಡಲಿಲ್ಲ ಎಂದು ಸಾಕ್ಷಿ ಹೇಳುತ್ತಾರೆ. ಈ ವಿಷಯವನ್ನು ನನ್ನ ವಾದಪತ್ರದಲ್ಲಿ ಬರೆಯಿಸಿಲ್ಲ. ನಾನು ಈ ದಾವೆಯಲ್ಲಿ ಪಹಣಿಯನ್ನು ಹೊರತುಪಡಿಸಿ ಬೇರೆ ದಾಖಲೆಗಳನ್ನು ಕೊಟ್ಟಿಲ್ಲ ಎಂದರೆ ಸರಿ.

ನಿ ಪಿ 9 ರಿಂದ ನಿ ಪಿ 11 ಇವುಗಳನ್ನು ಆನಂದಸ್ವಾಮಿ, ಪಾಂಡು ಮತ್ತು ಧನಂಜಯ ಇವರಿಗೆ ಮಾರಾಟ ಮಾಡಿದ್ದಾರೆ. ಅವರ 3 ಜನರ ಹೆಸರುಗಳು ಕ್ರಯಪತ್ರದಲ್ಲಿ ಬರೆದಿಲ್ಲ ಎಂದರೆ

ಸರಿ. ಅವರು partnership ನಲ್ಲಿ ಆ ಸ್ವತ್ತುಗಳನ್ನು ಪಡೆದಿದ್ದಾರೆ ಎಂದು ಸಾಕ್ಷಿ ಹೇಳುತ್ತಾರೆ. ಕೃಷ್ಣಾಚಾರ್ ಇವರು ತೀರಿಕೊಂಡ ನಂತರ ಜಯಲಕ್ಷ್ಮಮ್ಮ ಇವರು ಭಾಗ ಕೇಳಿಲ್ಲ ಎಂದರೆ ಸರಿಯಲ್ಲ. ಆಗಾಗ ಕೇಳುತ್ತಿದ್ದರು ಎಂದು ಸಾಕ್ಷಿ ಹೇಳುತ್ತಾರೆ. ಈ ವಿಷಯವನ್ನು ನನ್ನ ವಾದಪತ್ರದಲ್ಲಿ ಬರೆಸಿಲ್ಲ. ಅದನ್ನು ಬರೆಸಲು ಯಾವುದೆ ತೊಂದರೆ ಇರಲಿಲ್ಲ ಎಂದರೆ ಸರಿ. ಅದರ ಅವಶ್ಯಕತೆ ನಮಗೆ ಇರಲಿಲ್ಲ ಎಂದು ಸಾಕ್ಷಿ ಹೇಳುತ್ತಾರೆ. ಪ್ರತಿವಾದಿ 1 ರಿಂದ 8 ರವರು ನಮಗೆ ಯಾವ ರೀತಿ ಸಂಬಂಧಿಕರಾಗಬೇಕು ಎಂದು ವಾದಪತ್ರದಲ್ಲಿ ಕೂಲಂಕುಷವಾಗಿ ಬರೆಸಿಲ್ಲ ಎನ್ನುವ ಪ್ರಶ್ನೆಗೆ ಸಾಕ್ಷಿ ವಂಶವೃಕ್ಷದಲ್ಲಿ ಕೊಟ್ಟಿದ್ದೇವೆ ಎಂದು ಹೇಳುತ್ತಾರೆ. ನನ್ನ ತಾಯಿ ಹಿರಿಯರಾಗಿದ್ದರಿಂದ ಅವರನ್ನು ಕರೆದುಕೊಂಡು ಬಂದು ಸಾಕ್ಷಿ ಹೇಳಿಸಲು ಯಾವುದೆ ತೊಂದರೆ ಇಲ್ಲ. 1993 ರಲ್ಲಿಯೇ ಭೂ ಪರಿವರ್ತನೆ ಆದ ನಂತರ ನಾವು ಭಾಗ ಕೇಳದೆ ಇದ್ದುದ್ದಕ್ಕೆ ದಾವಾ ಸ್ವತ್ತಿನಲ್ಲಿ ನಮಗೆ ಯಾವುದೆ ಭಾಗ ಇಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಕೇಸ್ ಹಾಕಿಕೊಂಡು ಇಲ್ಲದೆ ಇರುವ ಭಾಗವನ್ನು ಇದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮೂಲ ದಾಖಲಾತಿಗಳನ್ನು ಹಾಜರುಪಡಿಸಿದರೆ ನನಗೆ ತೊಂದರೆಯಾಗಬಹುದು ಎಂಬ ಕಾರಣಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ : ಇಲ್ಲ**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,**

**ಮಾಗಡಿ.**